**O.S.No.417/2009 - P.W.1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 24-03-2022.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದ:**

**1)** ನಿ.ಪಿ.41 ರ ಪ್ರಕಾರ ದಾವಾ ಆಸ್ತಿ ಸರ್ವೆ ನಂ.91/2 ಪಿತ್ರಾರ್ಜಿತ ಎಂದರೆ ಸರಿ. ಅದೇ ರೀತಿ ಸರ್ವೆ ನಂ.91/1 ಸಹ ಪಿತ್ರಾರ್ಜಿತ ಎಂದರೆ ಸರಿ. ಆಂಜಿನಪ್ಪನ ತಂದೆಯ ಹೆಸರು ಬೈರೇಗೌಡ ಎಂದರೆ ಸರಿ. ನಿ.ಪಿ.16 ರಂತೆ ಅವರಿಗೆ ಆಂಜಿನಪ್ಪ ಮತ್ತು ರಾಮೇಗೌಡ ಎಂಬುವವರು ಮಕ್ಕಳು ಎಂದರೆ ಸರಿ.

**2)** ದಾವಾ ಆಸ್ತಿ 1 ರಿಂದ 3 ಮೂಲತಃ ಬೈರೇಗೌಡರ ಕುಟುಂಬಕ್ಕೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆ ಕ್ರಯಕ್ಕೆ ಪಡೆದಿರುವ ಬಗ್ಗೆ ಕ್ರಯಪತ್ರ ಹಾಜರುಪಡಿಸಿದ್ದೇನೆ. ರಾಮೇಗೌಡ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ, ಅದೇ ರೀತಿ ಬೈರೇಗೌಡ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ.

**3)** ನಿ.ಪಿ.18 ರಲ್ಲಿರುವ ಆಸ್ತಿಯನ್ನು ಖರೀದಿಸಿದಾಗ ಭೈರಪ್ಪ ಬದುಕಿದ್ದರು ಎಂದರೆ ಸರಿ. ನಿ.ಪಿ.16 ರ ಪ್ರಕಾರ ದಾವಾ ಆಸ್ತಿ 1 ರಿಂದ 3 - ಪ್ರತಿವಾದಿ ನಂ.6 ರಿಂದ 9 ರವರ ಭಾಗಕ್ಕೆ ಬಂದಿದೆ ಎಂದರೆ ಸರಿ. ಸದರಿ ಪ್ರತಿವಾದಿ ನಂ.6 ರಿಂದ 9 ರವರು ಸದರಿ ಆಸ್ತಿ 1 ರಿಂದ 3 ನ್ನು ಪ್ರತಿವಾದಿ ನಂ.10 ರಿಂದ 12 ರವರೆಗೆ 2005 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ.10 ರಿಂದ 12 ಸದರಿ ಆಸ್ತಿಗಳನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.

**4)** ನಾನು ವಾದಪತ್ರದೊಂದಿಗೆ ಹಾಜರುಪಡಿಸಿದ ದಾವಾ ಆಸ್ತಿ 1 ರಿಂದ 3 ಆಸ್ತಿಗಳ ಪಹಣಿ ಪತ್ರಿಕೆಗಳನ್ನು ದಿನಾಂಕ: 19-08-2008 ರಂದು ಪಡೆದುಕೊಂಡಿದ್ದೇನೆ ಎಂದರೆ ಸರಿ. ಸದರಿ ಪಹಣಿಯಂತೆ ಸದರಿ ಆಸ್ತಿಗಳು ಭೂಪರಿರ್ತನೆ ಆಗಿವೆ ಎಂದರೆ ನನಗೆ ಗೊತ್ತಿಲ್ಲ, ದಾಖಲೆ ಪ್ರಕಾರ ಆಗಿರಬಹುದು. ಸದರಿ ದಾಖಲೆಯನ್ನು ನಾನು ಮತ್ತು ನಮ್ಮ ವಕೀಲರು ಪರಿಶೀಲಿಸಿ ಹಾಜರುಪಡಿಸಿದ್ದೇವೆ ಎಂದರೆ ಸರಿ. ಸದರಿ ಪಹಣಿಯಂತೆ ಅದು ಭೂಪರಿವರ್ತನೆ ಆಗಿದೆ ಎಂದು ಗೊತ್ತಿದ್ದರು ನಾವು ದಾವೆಯಲ್ಲಿ ಸದರಿ ಆಸ್ತಿಗಳನ್ನು ವ್ಯವಸಾಯದ ಜಮೀನು ಎಂದು ತಪ್ಪಾಗಿ ಕಾಣಿಸಿದ್ದೇವೆ ಎಂದರೆ ಭೂಪರಿವರ್ತನೆ ಆಗಿದ್ದು ನಮಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

**5)** ದಾವಾ ಆಸ್ತಿಯ ದಾಖಲೆ ಬಗ್ಗೆ ನಮ್ಮ ತಾಯಿಗೆ ಗೊತ್ತಿತ್ತಾ? ಎಂದರೆ ಅವರಿಗೆ ಗೊತ್ತಿಲ್ಲ, ಅವರು ಅಷ್ಟಾಗಿ ಓದಿಲ್ಲ ಎಂದು ಹೇಳುತ್ತಾರೆ. ಈ ದಾವೆ ದಾಖಲು ಮಾಡಲು ನಮ್ಮ ಅಕ್ಕ ಮಾಹಿತಿ ನೀಡಿರುತ್ತಾರೆ. ದಾವಾ ಆಸ್ತಿಗಳ ಬಗ್ಗೆ ನನಗಾಗಲೀ, ನನ್ನ ತಾಯಿಗಾಗಲೀ ಮಾಹಿತಿ ಇಲ್ಲ ಎಂದರೆ ಸ್ವಲ್ಪ ಸ್ವಲ್ಪ ಮಾಹಿತಿ ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯು ನನ್ನ ತಾತನಿಗೆ ಸೇರಿದ್ದು ಎಂದು ತಿಳಿದುಕೊಂಡು ಆ ಆಧಾರದ ಮೇಲೆ ನಾನು ಸಾಕ್ಷಿ ಹೇಳುತ್ತಿದ್ದೇನೆ. ಯಾವ ದಾಖಲೆಯನ್ನು ಪರಿಶೀಲಿಸಿ ಈ ದಾವೆ ಹಾಕಿದ್ದೇವೆ ಎಂದು ಹೇಳಲು ಈಗ ಆಗುವುದಿಲ್ಲ. ದಾವೆ ಹಾಕುವ ಮೊದಲು ಪ್ರತಿವಾದಿ ನಂ.6 ರಿಂದ 13 ರವರೆಗೆ ಸಂಬಂಧಪಟ್ಟ ಕ್ರಯಪತ್ರಗಳನ್ನು ತಿಳಿದುಕೊಂಡಿದ್ದೇವೆ ಮತ್ತು ಅವರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ? ಎಂದರೆ ದಾವೆ ಹಾಕಿದ್ದೇವೆ ಎಂದು ಹೇಳುತ್ತಾರೆ.

**6)** ವಾದಪತ್ರ ಹಾಕಲು ನಮ್ಮ ತಾಯಿ ಮಾಹಿತಿ ನೀಡಿರುತ್ತಾರೆ. ಯಾವ ರೀತಿ ದಾಖಲೆ ಸೃಷ್ಟಿಸಿದ್ದಾರೆ ಎಂದರೆ ನಮ್ಮ ತಾಯಿಯನ್ನು ವಂಶವೃಕ್ಷದಲ್ಲಿ ತೋರಿಸದೇ ದಾಖಲೆ ಸೃಷ್ಟಿಸಿದ್ದಾರೆ ಎಂದು ಹೇಳುತ್ತಾರೆ. ಯಾವ ರೀತಿ ಮೋಸ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಾಯಿಯನ್ನು ವಂಶವೃಕ್ಷದಲ್ಲಿ ತೋರಿಸದೇ ಮೋಸ ಮಾಡಿದ್ದಾರೆ ಎಂದು ಹೇಳುತ್ತಾರೆ.

**7)** ನಿ.ಪಿ.2 - ವಂಶವೃಕ್ಷವನ್ನು ತಯಾರಿಸಲು ನಮ್ಮ ತಾಯಿ ಹೇಳಿಕೆ ನೀಡಿರುತ್ತಾರೆ. ನಿ.ಪಿ.2 ನ್ನು ನಮ್ಮ ತಾಯಿಯ ಹೇಳಿಕೆಯಂತೆ ಗ್ರಾಮಲೆಕ್ಕಾಧಿಕಾರಿ ಬರೆದಿರುತ್ತಾರೆ, ಅವರ ಹೆಸರು ಹೇಳಲು ಆಗುವುದಿಲ್ಲ. ಅದರಲ್ಲಿ ತಪ್ಪು ಮಾಹಿತಿ ಇದ್ದರೆ ಗ್ರಾಮಲೆಕ್ಕಾಧಿಕಾರಿ ಜವಾಬ್ದಾರರಲ್ಲ ಎಂದು ಬರೆದಿದ್ದಾರೆ ಎಂದರೆ ಸರಿ, ನಮ್ಮ ತಾಯಿ ಯಾವುದೇ ದಾಖಲೆ ನೀಡದೇ ನಿ.ಪಿ.2 ನ್ನು ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ಸಹೋದರಿಯರು ಎಂದು ಹೇಳುವವರ ಪಾನ್ ಕಾರ್ಡ್, ಆಧಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿಯನ್ನು ನೋಡಿಲ್ಲ. ವಾದಿ, ಪ್ರತಿವಾದಿ ನಂ.1, 2, 4 ಮತ್ತು 5 ರವರು ಆಂಜಿನಪ್ಪನ ಮಕ್ಕಳು ಎಂದು ತೋರಿಸಲು ನಮ್ಮ ಬಳಿ ಬೇರೆ ದಾಖಲೆ ಇಲ್ಲ. ನಿ.ಪಿ.2 ಕ್ಕೆ ಸಾಕ್ಷಿಯಾಗಿ ಸಹಿ ಹಾಕಿದ ಸಾಕ್ಷಿದಾರರ ಬಗ್ಗೆ ವಿಚಾರಿಸಿದ್ದೇನೆ, ಅದು ನಮ್ಮ ತಾಯಿಗೆ ಗೊತ್ತು. ಅದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಸದರಿ ಸಾಕ್ಷಿದಾರರು ಯಾರು ಎಂದು ನಮ್ಮ ತಾಯಿಯನ್ನು ಕೇಳಬೇಕು.

**8)** ನಿ.ಪಿ.2 ನ್ನು ಗ್ರಾಮಲೆಕ್ಕಾಧಿಕಾರಿ ಕಛೇರಿಯಲ್ಲಿ ತಯಾರಿಸಿರುತ್ತಾರೆ ಎಂದು ನಮ್ಮ ತಾಯಿ ಹೇಳಿರುತ್ತಾರೆ. ನಮ್ಮ ತಾಯಿಯನ್ನು ವಿಚಾರಣೆ ಮಾಡಿಸಲು ಆಗುವುದಿಲ್ಲ, ಕಾರಣ ಅವರಿಗೆ ವಯೋಸಹಜ ಖಾಯಿಲೆ ಇರುತ್ತದೆ. ನಮ್ಮ ತಾಯಿ ಮಾತನಾಡುತ್ತಾರೆ, ಓಡಾಡುವುದಿಲ್ಲ.

**9)** ನಾವು ಪಡೆದುಕೊಂಡ ಮಧ್ಯಂತರ ಆದೇಶ ದಿನಾಂಕ: 02-08-2012 ರಲ್ಲಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ಮೇಲೆ ನಾವು ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. ನಿ.ಪಿ.2 ನ್ನು ಈ ಸುಳ್ಳು ದಾವೆಗೋಸ್ಕರ ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ.1 ರಿಂದ 4 ರ ಮೇಲೆ ನಮಗಾಗಲೀ, ಪ್ರತಿವಾದಿ ನಂ.1, 2, 4 ಮತ್ತು 5 ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಯನ್ನು ಸೇರಿ ಒಟ್ಟು ಸುಮಾರು 150 ಎಕರೆಗೆ ಕಂಪೌಂಡ್ ಹಾಕಿದ್ದಾರೆ ಎಂದರೆ ಸರಿಯಲ್ಲ. ದಾವೆ ಹಾಕುವ ಮೊದಲು ಈ ಆಸ್ತಿಯನ್ನು ನೋಡಿ ದಾವೆ ಹಾಕಿರುತ್ತೇವೆ. ಸದರಿ ಆಸ್ತಿ ಉಳಿದ ಬೇರೆ ಆಸ್ತಿಗಳ ಜೊತೆ ಸೇರಿ ಅಭಿವೃದ್ಧಿ ಹೊಂದಿದೆ, ಅದನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. 13 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ.

**10)** ಉಳಿದ ಪ್ರತಿವಾದಿಗಳ ಪರ ವಕೀಲರು ಗೈರುಹಾಜರಿರುವುದರಿಂದ, ಅವರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**11) ಮರು ವಿಚಾರಣೆ ಇಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**